ಕಾವೇರಿ ನಾಲ್ಕನೇ ಹಂತದ ಬಗ್ಗೆ

364 (898) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಸರ್ಕಾರವು ನಾಲ್ಕನೇ ಹಂತದ ಯೋಜನೆಯನ್ನು ಪ್ರಾರಂಭಿಸಿದೆಯೇ?

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು?

ಇ) ಈ ಯೋಜನೆಯ ಕಾರ್ಯವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಕಾವೇರಿ ನಾಲ್ಕನೇ ಹಂತದ ಯೋಜನೆಯು 8ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರ್ಪಡಿಸಿದೆ ಮತ್ತು ಈ ಯೋಜನೆಯನ್ನು 1992-93ರಲ್ಲಿ ಪ್ರಾರಂಭಿಸಲಾಗುವುದು.

ಆ) ಈ ಯೋಜನೆಯ ಅಂದಾಜು ವೆಚ್ಚ ಸುಮಾರು 1000.00ಕೋಟಿ ರೂಪಾಯಿಗಳು. ಈ ಯೋಜನೆಯನ್ನು ಎರಡು ಘಟ್ಟಗಳಲ್ಲಿ ತೆಗೆದುಕೊಳ್ಳಲಾಗುವುದು. ಮೊದಲನೇ ಘಟ್ಟದ ಅಂದಾಜು ವೆಚ್ಚ 490.00 ಕೋಟಿ ರೂಪಾಯಿಗಳು.

ಇ) ಈ ಯೋಜನೆಯ ಕಾರ್ಯವನ್ನು 1992-93ರಲ್ಲಿ ಪ್ರಾರಂಭಿಸಲಾಗುವುದು.

ದಸ್ತಗಿರಿ ಹಾಗೂ ಪ್ರಾಸಿಕ್ಯೂಷನ್‌ಗೆ ಒಳಗಾದ ಡಕಾಯಿತರ ಸಂಖ್ಯೆ.

365 (629) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989-90, 1990-91 ಮತ್ತು 1991-92ರ ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ಒಟ್ಟು ದರೋಡೆಗಳ ಸಂಖ್ಯೆ ಎಷ್ಟು?

ಆ) ದಸ್ತಗಿರಿ ಹಾಗೂ ಪ್ರಾಸಿಕ್ಯೂಟಿಗೆ ಒಳಗಾದ ಡಕಾಯಿತರ ಸಂಖ್ಯೆ;

ಇ) ಪ್ರಾಸಿಕ್ಯೂಟ್ ಪ್ರಕರಣಗಳ ಫಲಿತಾಂಶ;

ಈ) ಡಕಾಯಿತಿಗಳನ್ನು ತಡೆಯಲು ಕೈಗೊಂಡ ಕ್ರಮ;

ಶ್ರೀ ಧರ್ಮಸಿಂಗ್ (ಗೃಹ ಸಚಿವರು):-

ಅ)

ವರ್ಷ	ದರೋಡೆಗಳ ಸಂಖ್ಯೆ
1989	119
1990	116
1991	149
1992 (31-1-92ರವರೆಗೆ)	14

ಆ) ಇಲ್ಲಿಯತನಕ ದಸ್ತಗಿರಿಯಾದ ಡಕಾಯಿತರ ಸಂಖ್ಯೆ

1989	1990	1991	1992 (31-1-92ರ ವರಗೆ)
153	155	219	26